**ಪಿ.ಡಬ್ಲ್ಯೂಃ 1**

ದಿನಾಂಕಃ23.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ವಾದಿಯ ಪರ ಶ್ರೀ ಎಂ ಹೆಚಃ ವಕೀಲರಿಂದ**

ಇಂದು ನಾನು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ. ನನ್ನ ವಾದ ಸಮರ್ಥನೆಗಾಗಿ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

2. ದಿಃ16.07.1979 ರಂದು ಬರೆಯಲಾದ ವಿಕ್ರಯಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.1 ಎಂದು, ದಾವಾ ಆಸ್ತಿಗೆ ಸಂಬಂಧಿಸಿದ 6 ಕೈಬರಹದಲ್ಲಿದ್ದ ಪಹಣಿ ಪತ್ರಿಕೆಗಳ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಪಿ.1 ರಿಂದ ನಿ.ಪಿ.7 ಎಂದು, ದಾವಾ ಜಮೀನಿನ ಒಟ್ಟು 12 ಗಣಕೀಕೃತ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.8 ರಿಂದ 19 ಎಂದು, ದಿಃ03.01.2023 ರಂದು ತಹಶೀಲ್ದಾರ್ ರವರಿಗೆ ನಾನು ಕೊಟ್ಟ ಅರ್ಜಿಯ ಸ್ವಿಕೃತಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.20 ಎಂದು, ದಿಃ03.01.2023 ರಂದು ತಹಶೀಲ್ದಾರ್ ರವರು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.21 ಎಂದು, ನಮೂನೆ 24 ರ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.22 ಎಂದು, 2 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಪಿ.23 ಮತ್ತು 24 ಎಂದು, ಋಣಭಾರ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.25 ಎಂದು, ನನ್ನ ತಾಯಿ ಗಾಧಿಲಿಂಗಮ್ಮ ಇವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.26 ಎಂದು, ದಿಃ29.12.2022 ರಂದು ಅಂಚೆ

**ಪಿ.ಡಬ್ಲ್ಯೂ: 1**

ಮೂಲಕ ಹಚ್ಚೋಳ್ಳಿ ಪೊಲೀಸ್ ಠಾಣೆಗೆಕಳುಹಿಸಿದ ದೂರಿನ ಪ್ರತಿಯನ್ನು ಮತ್ತು ಆ ಕುರಿತು ಒಂದುದ ಅಂಚೆ ರಸೀದಿಯನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಪಿ.27 ಮತ್ತು 28 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಪ್ರತಿವಾದಿಯ ಪರ ಶ್ರೀ ಎಎಸ್ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಯಾವುದೇ ಪ್ರತಿವಾದ ಪತ್ರ ಸಲ್ಲಿಸದೆ ಇರುವುದರಿಂದ ವಿನಂತಿಯನ್ನು ತಿರಸ್ಕರಿಸಿ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**